## ಪ್ಯಾರಿಸ್‌ನಲ್ಲಿ ಬೆಕ್ಹಾಮ್



ಬಹುಶಃ ಫುಟ್‌ಬಾಲ್‌ನಲ್ಲಿ ಆಟಗಾರರಷ್ಟು ಗಳಿಸುವಷ್ಟು ಜನಪ್ರಿಯತೆ ಮತ್ತು ಅಷ್ಟೈಶ್ವರ್ಯಗಳನ್ನು ಕ್ರಿಕೆಟಿಗರೂ ಗಳಿಸಲು ಸಾಧ್ಯವಿಲ್ಲ. ಈ ಡೇವಿಡ್ ಬೆಕ್ಹಾಮ್ (ಬರ್ತ್‌ಡೇ 2–5–75) ಎಂಬ ಇಂಗ್ಲೆಂಡಿನ ಮಧ್ಯವಯಸ್ಸಿನ ಫುಟ್‌ಬಾಲಿಗನನ್ನೇ ನೋಡಿ. ಈವರೆಗೆ ಲಾಸ್ ಏಂಜಲೀಸ್ ಗ್ಯಾಲಕ್ಸಿ ಕ್ಲಬ್ ತಂಡದಲ್ಲಿದ್ದ ಈತನ ಕಾಂಟ್ರಾಕ್ಟ್ ಡಿಸೆಂಬರ್‌ನಲ್ಲಿ ಮುಕ್ತಾಯವಾಗುತ್ತಿದೆ. ಮುಂದಿನ ಸೀಸನ್‌ಗೆ ಈತ ಪ್ಯಾರಿಸ್ ಸೇಂಟ್ ಜರ್ಮನ್ ಕ್ಲಬ್‌ಗೆ ಆಡುವುದು ಖಚಿತವಾಗಿದೆ. ಈ ಸುದ್ದಿಯಿಂದ ಫ್ರೆಂಚ್ ಜನ ರೋಮಾಂಚಿತರಾಗಿದ್ದಾರೆ. ಪ್ಯಾರಿಸ್‌ನಲ್ಲಿ ಈಗಾಗಲೆ ಸಂಭ್ರಮ ಎಷ್ಟು ಮುಗಿಲಿಗೇರಿದೆ ಎಂದರೆ, ಡೇವಿಡ್ ಬೆಕ್ಹಾಮ್‌ನನ್ನು ಸ್ವಾಗತಿಸಲು ಇಡೀ ಪ್ಯಾರಿಸ್ ನಗರವನ್ನೇ ಶೃಂಗರಿಸಲಿದ್ದಾರಂತೆ. ಪ್ಯಾರಿಸ್ ಅತ್ಯಂತ ಪ್ರತಿಷ್ಠಿತ ರಸ್ತೆಯಾಗಿರುವ ಚಾಂಪ್ಸ್ ಎಲಿಸಿಸ್‌ನಲ್ಲಿ (ಇಲ್ಲಿ ಹದಿನಾರು ರಸ್ತೆಗಳು ಒಟ್ಟು ಸೇರುವ ಜಾಗದಲ್ಲಿ ವಿಶ್ವಯುದ್ಧದಲ್ಲಿ ಮಡಿದ ಯೋಧರ ಬೃಹತ್ ಸ್ಮಾರಕವೊಂದಿದೆ) ಭಾರೀ ತಾರಾಮೇಳವೊಂದನ್ನು ಏರ್ಪಡಿಸಿ, ಡೇವಿಡ್ ಬೆಕ್ಹಾಮ್‌ನನ್ನು ಸ್ವಾಗತಿಸುವ ಏರ್ಪಾಡು ನಡೆದಿದೆ! ಈ ಸಮಾರಂಭಕ್ಕೆ ಹಾಲಿವುಡ್‌ನ ತಾರೆಯರೂ, ಗಾಯಕರೂ ಬರಲಿದ್ದಾರಂತೆ! ಒಬ್ಬ ಫುಟ್‌ಬಾಲ್ ಆಟಗಾರ ಹೀಗೆ ಒಂದು ಕ್ಲಬ್ ಬಿಟ್ಟು ಇನ್ನೊಂದು ಕ್ಲಬ್ ಸೇರುವುದೇ ಬಹುದೊಡ್ಡ ಜಾಗತಿಕ ಘಟನೆಯೆಂಬಂತೆ ಬಿಂಬಿತವಾಗುವುದು ಫುಟ್‌ಬಾಲ್‌ನಲ್ಲಿ ಮಾತ್ರ!

ಬೆಕ್ಹಾಮ್ ಕಡಿಮೆ ಕುಳವೇನಲ್ಲ. 2004ರಲ್ಲಿ ಪ್ರಪಂಚದ ಅತ್ಯಧಿಕ ಸಂಭಾವನೆ ಪಡೆದ ಆಟಗಾರನೀತ. 'ಫಿಫಾ' ವರ್ಷದ ಆಟಗಾರ ಪ್ರಶಸ್ತಿಯಲ್ಲಿ ಎರಡು ಸಲ 'ರನ್ನರ್ ಅಪ್' ಆಗಿದ್ದಾತ. 100 ಚಾಂಪಿಯನ್ಸ್ ಲೀಗ್ ಫುಟ್ ಬಾಲ್‌ನಲ್ಲಿ ಆಡಿದ ಮೊದಲ ಬ್ರಿಟನ್ ಆಟಗಾರ. 2010ರಲ್ಲಿ ಗಾಯಾಳುವಾದ್ದರಿಂದ ವಿಶ್ವಕಪ್‌ನಲ್ಲಿ ಇಂಗ್ಲೆಂಡ್ ಪರವಾಗಿ ಆಡಲಾಗದಿದ್ದರೂ ಈತನ ಜನಪ್ರಿಯತೆ ಕುಂದಿಲ್ಲ. 17ರ ಹರೆಯದಲ್ಲೇ ವೃತ್ತಿಪರ ಕ್ಲಬ್ ಆಟಗಾರನಾದ ಈತ ಮೊದಲು ಮ್ಯಾಂಚೆಸ್ಟರ್ ಯುನೈಟೆಡ್ ನಲ್ಲಿ ಕಣ್ಮಣಿಯಾಗಿದ್ದ. ಆ ಬಳಿಕ ರಿಯಲ್ ಮ್ಯಾಡ್ರಿಡ್ ಸೇರಿದ. ಅಲ್ಲಿಂದ ಲಾಸ್ ಏಂಜಲೀಸ್ ಕ್ಲಬ್‌ಗೆ. ಹೀಗೆ ಹಾರುತ್ತಲೇ ಈತನ ಸಂಭಾವನೆಯೂ ಮಿಲಿಯಗಟ್ಟಳೆ ಏರಿತು. ಮಾಡೆಲ್, ಗಾಯಕಿ, ಉದ್ಯಮಿ, ಫ್ಯಾಶನ್ ಡಿಸೈನರ್ – ಹೀಗೆ ಎಲ್ಲವೂ ಆಗಿರುವ ವಿಕ್ಟೋರಿಯಾಳನ್ನು ಮದುವೆಯಾಗಿ ನಾಲ್ಕು ಮಕ್ಕಳ ತಂದೆಯೂ ಆಗಿರುವ ಬೆಕ್ಹಾಮ್, ವಯಸ್ಸು 37 ದಾಟಿದ್ದರೂ ಫುಟ್ ಬಾಲ್ ಮೈದಾನದಲ್ಲಿ ಇನ್ನೂ ಬೇಡಿಕೆಯನ್ನು ಉಳಿಸಿಕೊಂಡಿರುವುದು ವಿಶೇಷ. ಫ್ರಾನ್ಸ್‌ನ ಜನ ಸಂಭ್ರಮ ಪಡಲೂ ಸಕಾರಣವಿದೆ.



## ಮರಳಿ ಬಂದ ರೆಹಮಾನ್

ತಾಜ್‌ಮಹಲ್ ಮುಂದೆ ಸಿನಿಮಾದ ಹಾಡುಗಳ ಸೀಡಿ ಬಿಡುಗಡೆ ಮಾಡಬೇಕೆನ್ನುವುದು ಆ ಸಿನಿಮಾದ ನಿರ್ಮಾಪಕರ ಕನಸಿಗೆ ಅಧಿಕಾರಿಗಳು ಕ್ಯಾರೇ ಅನ್ನಲಿಲ್ಲ. 'ಇದೊಂದು ಅದ್ಭುತ ಪ್ರೇಮಕಥೆಯುಳ್ಳ ಸಿನಿಮಾ. ದಯವಿಟ್ಟು ಅನುಮತಿ ಕೊಡಿ' ಎಂದು ಬೇಡಿದರೂ 'ಅನುಮತಿ ಕೊಡೋದು ಸಾಧ್ಯವಿಲ್ಲ ಕಣ್ರೀ' ಎನ್ನುವುದು ಅಧಿಕಾರಿಗಳ ಸ್ಪಷ್ಟೋಕ್ತಿ. ಕೊನೆಗೆ ನಿರ್ಮಾಪಕರು ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಹೆಸರು ತೆಗೆದರು. 'ಈ ಸಿನಿಮಾದ ಸಂಗೀತ ನಿರ್ದೇಶಕರು ರೆಹಮಾನ್. ಅವರೇ ಸಮಾರಂಭದ ಮುಖ್ಯ ಅತಿಥಿ' ಎಂದರು. ತಕ್ಷಣ ಅನುಮತಿ ಸಿಕ್ಕಿತು! ರೆಹಮಾನ್ ಎಂಬ ಸಂಗೀತ ಮಾಂತ್ರಿಕನ ಪ್ರತಿಭೆ ಅಂಥದ್ದು!

'ಏಕ್ ದೀವಾನಾ ಥಾ' ಎನ್ನುವುದು ಆ ಸಿನಿಮಾದ ಹೆಸರು. ಆಸ್ಕರ್, ಗ್ರಾಮ್ಮಿ ಎಂದೆಲ್ಲಾ ಜಾಗತಿಕ ಮಟ್ಟದಲ್ಲಿ ತಿರುಗಾಡುತ್ತಿದ್ದ ರೆಹಮಾನ್ ಮೂರು ವರ್ಷಗಳ ಬಳಿಕ ಬಾಲಿವುಡ್‌ಗೆ ಮರಳಿ ಬಂದಿದ್ದಾರೆ. '45ರ ಹರೆಯದಲ್ಲಿ ಮತ್ತೆ ಪ್ರೇಮಕಥೆಯತ್ತ ಹೊರಳಿದ್ದಾರಾ..' ಎಂಬ ಪ್ರಶ್ನೆಗೆ ರೆಹಮಾನ್ ಮೆಲುದನಿಯಲ್ಲಿ ಹೇಳಿದ್ದು– 'ನಾನು ಎಂದಿಗೂ ಪ್ರೇಮಿಯೇ. ಪ್ರೇಮಗೀತೆಗಳಿಂದ ಆಚೆ ಹೋಗಿಯೇ ಇಲ್ಲ!'

ತಮಿಳಿನಲ್ಲಿ ಸೂಪರ್‌ಹಿಟ್ ಆಗಿರುವ 'ವಿನ್ನೈತಾಂಡಿ ವರುವಾಯ' ಎನ್ನುವ ಸಿನಿಮಾ ಹಿಂದಿಯಲ್ಲಿ 'ಏಕ್ ದೀವಾನಾ ಥಾ' ಆಗಿ ರಿಮೇಕ್ ಆಗಿದೆ. ತೆಲುಗಿನಲ್ಲೂ ಈ ಸಿನಿಮಾ ಯಶಸ್ವಿಯಾಗಿದೆ. ಮತ್ತೆ ಹಿಂದಿಗೆ ಬರುವಾಗ ಸಂಗೀತವನ್ನು ಬದಲಾಯಿಸಲು ರೆಹಮಾನ್ ಒಪ್ಪಿಲ್ಲ. 'ಮೂಲ ಸಂಗೀತವೇ ಬಹಳ ಚೆನ್ನಾಗಿದೆ. ಅದನ್ನೇ ಉಳಿಸಿಕೊಂಡಿದ್ದೇನೆ. ಹಿಂದಿಯಲ್ಲಿ ಜಾವೇದ್ ಅಖ್ತರ್ ಅವರ ಹಾಡುಗಳು ಅದ್ಭುತವಾಗಿವೆ' ಎನ್ನುವುದು ರೆಹಮಾನ್ ಉತ್ತರ. 'ರಾಕ್‌ಸ್ಟಾರ್'ನ ಹಾಡುಗಳು ಹಿಟ್ ಆಗಿರುವುದು ರೆಹಮಾನ್ ಹೆಮ್ಮೆಗೆ ಗರಿ ಮೂಡಿಸಿವೆ. ಈಗ ತನ್ನ ಮೊದಲ ಚಿತ್ರದ ಸ್ಕ್ರಿಪ್ಟ್ ಬರೆಯುವಲ್ಲಿ ಬ್ಯುಸಿ ಆಗಿರುವ ರೆಹಮಾನ್ ಆ ಮೂಲಕವೂ ಹೊಸ ದಾಖಲೆ ಬರೆಯಲು ಹೊರಟಿದ್ದಾರೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65